JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಪುನರ್ ವಸತಿ ನೆಲೆಸಿಗರ ಶಿಕ್ಷಣದಲ್ಲಿ ಮಾತೃಭಾಷೆ ಮಹತ್ವ

**(Importance of Mother Tongue in Rehabilitation Settlers Education)**

**ಹನುಮಂತಪ್ಪ**
ಸಂಶೋಧನಾರ್ಥಿ,
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ-583 276
ಮೊ.7676789591, hanuma7676@gmail.com

## ಪ್ರಸ್ತಾವನೆ

ಶಿಕ್ಷಣ ನಮಗೆ ಜ್ಞಾನ ನೀಡುತ್ತದೆ. ಒಂದು ಪ್ರದೇಶದಲ್ಲಿ ಶಿಕ್ಷಣವನ್ನು ಹೊಂದುವುದರಿಂದ ಜನರು ತಮ್ಮ ಯಶಸ್ಸಿಗೆ ಕೊಡುಗೆ ನೀಡುವ ರೀತಿಯಲ್ಲಿ ಯೋಚಿಸಲು ಮತ್ತು ವರ್ತಿಸಲು ಸಹಾಯ ಮಾಡುತ್ತದೆ. ಶಿಕ್ಷಣ ಅವರ ವೈಯಕ್ತಿಕ ತೃಪ್ತಿಯನ್ನು ಮಾತ್ರವಲ್ಲದೆ ಅವರ ಸಮುದಾಯವನ್ನು ಸುಧಾರಿಸುತ್ತದೆ. ಜೊತೆಗೆ ಶಿಕ್ಷಣವು ಮಾನವನ ವ್ಯಕ್ತಿತ್ವ, ಆಲೋಚನೆಗಳು ಇತರರೊಂದಿಗೆ ವ್ಯವಹರಿಸುವುದು ಮತ್ತು ಜೀವನದ ಅನುಭವಗಳಿಗೆ ಜನರನ್ನು ಸಿದ್ಧಗೊಳಿಸುತ್ತದೆ. ಶಿಕ್ಷಣವು ಸಂಶೋಧನೆ ಮತ್ತು ಹೊಸ ಆವಿಷ್ಕಾರಗಳಿಗೆ ಕಾರಣವಾಗುತ್ತದೆ. 1968-69ರಲ್ಲಿ ಬರ್ಮಾ ಮತ್ತು ಸಿಲೋನ್ ನಿಂದ ತಮಿಳು ಭಾಷಿಕ ಸಮುದಾಯದವರು, ಬಂಗಾಳಿ ಭಾಷಿಕ ಸಮುದಾಯದವರು 1971ರಲ್ಲಿ ಬಾಂಗ್ಲಾದೇಶದಿಂದ ನಿರಾಶ್ರಿತರಾಗಿ ಭಾರತಕ್ಕೆ ಬಂದು ನೆಲೆಸಿದವರು. ಅಂದಿನ ಭಾರತ ಸರ್ಕಾರ ಈ ಬೆಂಗಾಲಿ ಸಮುದಾಯದ ರಕ್ಷಣೆಗೆ ಭಾರತದ ಸುಮಾರು 13 ರಾಜ್ಯಗಳಲ್ಲಿ ಪುನರ್ ವಸತಿ ಶಿಬಿರಗಳನ್ನು ಸ್ಥಾಪಿಸುವುದರ ಮೂಲಕ ನೆಲೆಸಲು ಅವಕಾಶ ಮಾಡಿಕೊಡಲಾಯಿತು. ಈ ರೀತಿಯಾಗಿ ಕರ್ನಾಟಕದ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಆರ್ ಎಚ್ 1, 2, 3, 4 ಮತ್ತು 5 ರಲ್ಲಿ ಪುನರ್ ವಸತಿ(ಆರ್ ಎಚ್) ಕೇಂದ್ರಗಳಲ್ಲಿ ತಮಿಳು ಭಾಷಿಕ ಸಮುದಾಯದವರು ಮತ್ತು ಬಂಗಾಳಿ ಭಾಷಿಕ ಸಮುದಾಯದವರು ವಾಸಿಸುತ್ತಿದ್ದಾರೆ. ಸುಮಾರು 50 ವರ್ಷಗಳಿಂದ ಸಿಂಧನೂರು ತಾಲೂಕಿನಲ್ಲಿ ನೆಲೆಸಿರುವ ಪುನರ್ ವಸತಿ ನೆಲೆಸಿಗರ ಜನಸಂಖ್ಯೆ 2018-19ರಲ್ಲಿ ಸುಮಾರು 14,000ಕ್ಕಿಂತ ಹೆಚ್ಚಿನ ಜನರನ್ನು ಒಳಗೊಂಡಿರುವುದನ್ನು ಕಾಣಬಹುದು. ತಮಿಳು ಸಮುದಾಯದ ಮಾತೃಭಾಷೆ ತಮಿಳು, ಬೆಂಗಾಲಿ ಸಮುದಾಯದ ಮಾತೃಭಾಷೆ ಬಂಗಾಳಿ ಅಥವಾ ಬೆಂಗಾಲಿಯಾಗಿರುವುದು, ಆದರೆ ಈ ಸಮುದಾಯದವರು ಶಿಕ್ಷಣವನ್ನು ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಪಡೆಯಬೇಕಾಗಿದೆ. ಆದ್ದರಿಂದ ಪುನರ್ ವಸತಿಗಳಲ್ಲಿ ನೆಲೆಸಿದ ಸಮುದಾಯದವರು ಪ್ರಾಥಮಿಕ ಶಿಕ್ಷಣವನ್ನು

ಪಡೆಯುವಲ್ಲಿ ಭಾಷಾ ಮಾಧ್ಯಮದ ಮಹತ್ವದ ಕುರಿತು ಅಧ್ಯಯನ ಮಾಡುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

**ಮುಖ್ಯ ಪದಗಳು:** ತಮಿಳು, ಬೆಂಗಾಲಿ, ಸಮುದಾಯ, ಭಾಷೆ, ಪುನರ್ ವಸತಿ

## ಅಧ್ಯಯನದ ಉದ್ದೇಶ

- ಪುನರ್ ವಸತಿ ನೆಲೆಸಿಗರ ಶಿಕ್ಷಣದಲ್ಲಿ ಮಾತೃಭಾಷೆಯ ಮಹತ್ವ ತಿಳಿಯುವುದು.
- ಶಿಕ್ಷಣ ಪಡೆಯುವಲ್ಲಿ ಎದುರಾಗಿರುವ ಸಮಸ್ಯೆ ಮತ್ತು ಸವಾಲುಗಳನ್ನು ಅರಿಯುವುದು.

## ಅಧ್ಯಯನದ ಪ್ರಾಕಲ್ಪನೆ

- ಪುನರ್ ವಸತಿ ನೆಲೆಸಿಗರ ಸಮುದಾಯದವರ ಮಾತೃಭಾಷೆ ಮಹತ್ವ ಕುಂಠಿತವಾಗುತ್ತಿದೆ.

ಅಧ್ಯಯನದ ಮಹತ್ವ

ಪುನರ ವಸತಿ ನೆಲೆಸಿಗರ ಸಮುದಾಯದಲ್ಲಿ ಅಗಾಧವಾಗಿರುವ ಪಾರಂಪರಿಕ ಜ್ಞಾನ ಕೌಶಲ್ಯ, ಸಾಂಸ್ಕೃತಿಕ ಜೀವನ ತಿಳಿಯಲು ಹಾಗೂ ಸಮುದಾಯದವರ ಸಾಹಿತ್ಯದ ಮಹತ್ವ ತಿಳಿಯಲು ಮಾತೃಭಾಷೆಯಲ್ಲಿ ಶಿಕ್ಷಣದ ಜ್ಞಾನ ಅವಶ್ಯಕವಾಗಿ ಬೇಕಾಗುವುದು. ಈ ಸಮುದಾಯದವರಿಗೆ ತಮಗೆ ದೊರೆಯುವ ಸರ್ಕಾರಿ ಸೌಲಭ್ಯಗಳು ಮತ್ತು ಯೋಜನೆಗಳ ಬಗ್ಗೆ ತಿಳಿಯಲು ಶಿಕ್ಷಣ ಅವಶ್ಯಕವಾಗಿದೆ. ಪ್ರಸ್ತುತ ದಿನಗಳಲ್ಲಿ ಪುನರ್ ವಸತಿ ನೆಲೆಸಿಗರು ಎದುರಿಸುತ್ತಿರುವ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಸ್ಥಿತಿಗಳನ್ನು ಅರಿಯಲು ಮತ್ತು ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಶಿಕ್ಷಣದ ಪಾತ್ರ ಮಹತ್ತರವಾದದ್ದು.

## ಅಧ್ಯಯನ ವಿಧಾನ

ಪ್ರಸ್ತುತ ಕ್ಷೇತ್ರಾಧ್ಯಯನಕ್ಕೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಪುನರ್ ವಸತಿ (ಆರ್ ಎಚ್) 1, 2, 3, 4 ಮತ್ತು 5 ಕೇಂದ್ರಗಳಲ್ಲಿ ನೆಲೆಸಿರುವ ಸಮುದಾಯದವರನ್ನು ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಧಾನವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಪುನರ್ ವಸತಿ ನೆಲೆಸಿಗರ ಸಮುದಾಯದ ಶಿಕ್ಷಣದಲ್ಲಿ ಮಾತೃಭಾಷೆ ಮಹತ್ವವನ್ನು ತಿಳಿಯಲು ಪ್ರತಿಯೊಂದು ಪನರ್ ವಸತಿಗಳಿಂದ 10 ರಿಂದ 15 ಜನರನ್ನು ಸೇರಿಸಿ ಸಮುದಾಯಗಳ ಗುಂಪು ಸಂದರ್ಶನದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ರೀತಿ ಪಡೆದ ಮಾಹಿತಿಯಿಂದ ವರದಿಯನ್ನು ತಯಾರಿಸಲಾಗಿದೆ.

## ಪುನರ್ ವಸತಿ ನೆಲೆಸಿಗರ ಪರಿಚಯ

ಈ ಸಮುದಾಯಗಳ ಹಿನ್ನೆಲೆಯನ್ನು ನೋಡುವುದಾದರೆ ಮೊದಲನೆಯದಾಗಿ ತಮಿಳು ಸಮುದಾಯದವರು ಮೂಲತಃ ತಮಿಳುನಾಡು ರಾಜ್ಯದವರು. ಅವರು ಸುಮಾರು ವರ್ಷಗಳ ಹಿಂದೆ ಬ್ರಿಟಿಷರ ಆಡಳಿತಾವಧಿಯಲ್ಲಿ ದುಡಿಮೆಗಾಗಿ ಬರ್ಮಾ ದೇಶ ಮತ್ತು ಶ್ರೀಲಂಕಾ ದೇಶಕ್ಕೆ ಟೀ ಎಸ್ಟೇಟ್ ಕೆಲಸಕ್ಕೆ ಹೋಗಿದ್ದರು. ನಂತರ ಈ ದೇಶಗಳಲ್ಲಿ ಮತದಾನದ ಮತ್ತು ರಾಜಕೀಯ ಸಮಸ್ಯೆಗಳು ಉಂಟಾದವು. ಈ ಸಮುದಾಯಗಳನ್ನು ರಕ್ಷಿಸಲು ಭಾರತ ಸರ್ಕಾರ ೧೯೬೪

ಅಕ್ಟೋಬರ್ ನಲ್ಲಿ ಭಾರತದ ತಮಿಳುನಾಡಿನ ಚೆನ್ನೈಗೆ ಕರೆತರಲಾಯಿತು. ನಂತರ ರೈಲ್ವೆಗಳ ಮೂಲಕ ರಾಯಚೂರಿಗೆ, ನಂತರ ಬಸ್ಸುಗಳ ಮೂಲಕ ಸಿಂಧನೂರು ತಾಲೂಕಿಗೆ ಕರೆತರಲಾಯಿತು. ಪುನರ್ ವಸತಿಗಳನ್ನು ರಚಿಸಿ ನೆಲೆಸಲು ಅವಕಾಶ ಕಲ್ಪಿಸಿಕೊಡಲಾಯಿತು. ಪ್ರತಿಯೊಂದು ಕುಟುಂಬಕ್ಕೆ ಕೃಷಿ ಮಾಡಲು ೫ ಎಕರೆ ಜಮೀನು, ಎರಡು ಎತ್ತುಗಳು, ಕೃಷಿ ಸಲಕರಣೆಗಳಾದ ಸಲಾಕೆ, ನೇಗಿಲು, ಬೀಜಗಳನ್ನು ನೀಡಲಾಯಿತು. ಮಹಿಳೆಯರಿಗೆ ಸೂಜಿ, ದಾರ, ಹೊಲಿಗೆ ಯಂತ್ರಗಳನ್ನು ನೀಡಲಾಯಿತು. ಮೊದಲನೇ ಹಂತದಲ್ಲಿ ೬೦ ಕುಟುಂಬಗಳು ನಂತರ ೫೦ ನಂತರ ಹಂತ ಹಂತಗಳಲ್ಲಿ ಕುಟುಂಬಗಳನ್ನು ಇಲ್ಲಿಗೆ ಕರೆತರಲಾಯಿತು.

1971ರಲ್ಲಿ ಇಂಡೋ-ಪಾಕ್ ಯುದ್ಧದ ಸಂದರ್ಭದಲ್ಲಿ ಪೂರ್ವ ಪಾಕಿಸ್ತಾನ(ಈಗಿನ ಬಾಂಗ್ಲಾದೇಶ)ದ ಮೇಲೆ ಪಶ್ಚಿಮ ಪಾಕಿಸ್ತಾನದ ಅಧ್ಯಕ್ಷ ಯಾಹ್ಯಾ ಖಾನ್ ಆದೇಶದ ಮೇರೆಗೆ ಜನರ ವಿರುದ್ಧ ಆಪರೇಷನ್ ಸರ್ಚ್ ಲೈಟ್ ಮಿಲಿಟರಿ ಆರಂಭಿಸಿ, ಬಾಂಗ್ಲಾದೇಶದ ನರಮೇಧವನ್ನು ಪ್ರಾರಂಭಿಸಿತು. ಈ ಸಂದರ್ಭದಲ್ಲಿ ಬಾಂಗ್ಲಾದೇಶದಲ್ಲಿ ಬಿಹಾರಿ ಉರ್ದು ಮಾತನಾಡುವ ಮುಸಲ್ಮಾನ್ ಬಂಗಾಳಿಗಳು 80ರಷ್ಟು ಇದ್ದು, ಅಲ್ಪಸಂಖ್ಯಾತರಾದ ಹಿಂದೂ ಬಂಗಾಳಿಗಳ ಮೇಲೆ ಸಾಮೂಹಿಕ ಹತ್ಯೆ, ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ದೌರ್ಜನ್ಯ ಎಸಗಿದರು. ಈ ಹಿಂದೂ ಬಂಗಾಳಿಗಳ ರಕ್ಷಣೆಗಾಗಿ ಬಾಂಗ್ಲಾದೇಶದ ತಾತ್ಕಾಲಿಕ ಸರ್ಕಾರದ ಅಧ್ಯಕ್ಷರಾದ ಶೇಕ್ ಮುಜೀಬರ್ ರೆಹಮಾನ್ ರವರು ಭಾರತ ಸರ್ಕಾರದ ಪ್ರಧಾನಿಯಾದ ಶ್ರೀಮತಿ ಇಂದಿರಾ ಗಾಂಧಿಯವರ ನಡುವಿನ ಒಪ್ಪಂದದ ಮೂಲಕ ಹಿಂದೂ ಬಂಗಾಳಿಗಳನ್ನು ಭಾರತಕ್ಕೆ ಕರೆತರಲಾಯಿತು. ಭಾರತದ ರಾಜ್ಯಗಳಾದ ಛತ್ತೀಸ್ಗಡ, ಒಡಿಶಾ, ರಾಜಸ್ಥಾನ್, ಅಸ್ಸಾಂ, ಮಿಜೋರಾಂ, ನಾಗಾಲ್ಯಾಂಡ್ ಹಾಗೂ ಕರ್ನಾಟಕದಲ್ಲಿ ತಾತ್ಕಾಲಿಕ ಶಿಬಿರಗಳನ್ನು ನಿರ್ಮಿಸಿ ನೆಲೆಸಲು ಅವಕಾಶ ಮಾಡಿಕೊಡಲಾಯಿತು. ಬಾಂಗ್ಲಾದೇಶದ ಸ್ವಾತಂತ್ರ್ಯದ ನಂತರ 1973ರಲ್ಲಿ ಬಾಂಗ್ಲಾದೇಶಕ್ಕೆ ಹಿಂತಿರುಗಲು ಅವಕಾಶ ನೀಡಲಾಯಿತು, ಆದರೆ ಹೆಚ್ಚಿನ ಬಂಗಾಳಿಗಳು ಭಾರತದಲ್ಲಿ ನೆಲೆಸಲು ಇಚ್ಚಿಸಿದರು, ಭಾರತ ಸರ್ಕಾರ ಈ ಸಮುದಾಯದವರಿಗೆ ನೆಲೆಸಲು ಅವಕಾಶ ಮಾಡಿಕೊಡಲಾಯಿತು. ಈ ರೀತಿಯಾಗಿ ಕರ್ನಾಟಕದ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಪುನರ್ ವಸತಿ ಕೇಂದ್ರಗಳು 2, 3, 4 ಮತ್ತು 5ರಲ್ಲಿ ಬೆಂಗಾಲಿ ಸಮುದಾಯದವರು ಜೀವನ ನಡೆಸುತ್ತಿದ್ದಾರೆ.

## ಪುನರ್ ವಸತಿ ನೆಲೆಸಿಗರ ಶಿಕ್ಷಣದಲ್ಲಿ ಮಾತೃಭಾಷೆಯ ಮಹತ್ವ:

ಭಾರತ ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ದೇಶವಾಗಿದೆ. ಭಾರತದಲ್ಲಿ ದೇಶದ ರಾಜ್ಯಗಳು ರಚನೆಯಾಗಿರುವುದು ಅಥವಾ ವಿಂಗಡನೆ ಆಗಿರುವುದು ಭಾಷೆಗಳ ಆಧಾರದಲ್ಲಿ. ಆಂಧ್ರಪ್ರದೇಶದ ಪಟ್ಟಾಭಿ ಶ್ರೀರಾಮುಲು ಅವರು 1952ರಲ್ಲಿ ಭಾಷೆಗಳಿಗೆ ತನ್ನದೇ ಆದ ಮಹತ್ವ ನೀಡಬೇಕು ಮತ್ತು ರಾಜ್ಯಗಳ ವಿಂಗಡನೆಯಲ್ಲಿ ಭಾಷಾವಾರು ಪ್ರಾಂತಗಳ ರಚನೆಗೆ ಆದ್ಯತೆ ನೀಡಬೇಕೆಂದು ಉಪವಾಸ ಹೋರಾಟ ಮಾಡಿ ಮಡಿದರು. ಅದೇ ರೀತಿಯಾಗಿ ಭಾಷಾವಾರು ಪ್ರಾಂತಗಳಾಗಿ 1953ರಲ್ಲಿ ಆಂಧ್ರಪ್ರದೇಶ ಮೊದಲ ರಾಜ್ಯವಾಗಿ ರಚನೆಯಾಯಿತು.

**ಮಾತೃಭಾಷೆಯ ಮಹತ್ವ**

ಅರಿವಿನ ಬೆಳವಣಿಗೆ, ಸಾಂಸ್ಕೃತಿಕ ಗುರುತು ಮತ್ತು ಪರಿಣಾಮಕಾರಿ ಸಂವಹನಕ್ಕೆ ಮಾತೃಭಾಷೆ ಅಥವಾ ಸ್ಥಳೀಯ ಭಾಷೆ ನಿರ್ಣಾಯಕವಾಗಿದೆ. ಇದು ಮಗುವಿನ ಆರಂಭಿಕ ಕಲಿಕೆಯನ್ನು ಸುಗಮಗೊಳಿಸುತ್ತದೆ, ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುತ್ತದೆ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬಲಪಡಿಸುತ್ತದೆ.

ಜ್ಞಾನದ ಬೆಳವಣಿಗೆ: ಮಾತೃಭಾಷೆಯಲ್ಲಿ ಕಲಿಯುವುದು ಅರಿವಿನ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ವೇಗಗೊಳಿಸುತ್ತದೆ.

ಸಾಂಸ್ಕೃತಿಕ ಗುರುತು: ಮಾತೃಭಾಷೆ ವ್ಯಕ್ತಿಗಳನ್ನು ಅವರ ಪರಂಪರೆ, ಸಂಪ್ರದಾಯಗಳು ಮತ್ತು ಮೌಲ್ಯಗಳಿಗೆ ಗುರುತಿಸಲ್ಪಡುತ್ತದೆ. ಸಾಂಸ್ಕೃತಿಕ ಭಾವನೆಗಳನ್ನು ಮತ್ತು ಸ್ವಾಭಿಮಾನವನ್ನು ಬೆಳೆಸುತ್ತದೆ.

ಪರಿಣಾಮಕಾರಿ ಸಂವಹನ: ಮಾತೃಭಾಷೆ ಆಲೋಚನೆಗಳು ಮತ್ತು ಭಾವನೆಗಳ ಸ್ಪಷ್ಟ ಅಭಿವ್ಯಕ್ತಿಗೆ ಅನುವು ಮಾಡಿಕೊಡುತ್ತದೆ. ವಿಶೇಷವಾಗಿ ಬಾಲ್ಯದ ಬೆಳವಣಿಗೆಯಲ್ಲಿ.

ಕಲಿಕೆಗೆ ಅಡಿಪಾಯ: ಮಾತೃಭಾಷೆಯಲ್ಲಿ ಬಲವಾದ ಅಡಿಪಾಯವು ಸಾಕ್ಷರತಾ ಕೌಶಲ್ಯ ಮತ್ತು ಒಟ್ಟಾರೆ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಸುಧಾರಿಸುತ್ತದೆ ಎಂದು ಸಂಶೋಧನೆ ಸೂಚಿಸುತ್ತದೆ.

ಬಹುಭಾಷಾ ಜ್ಞಾನ: ಮಾತೃಭಾಷೆಯಲ್ಲಿ ಅಭಿವೃದ್ಧಿಪಡಿಸಿದ ಅರಿವಿನ ಕೌಶಲ್ಯಗಳನ್ನು ವರ್ಗಾಯಿಸಬಹುದಾದ್ದರಿಂದ ಇದು ಹೆಚ್ಚುವರಿ ಭಾಷೆಗಳನ್ನು ಕಲಿಯಲು ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ.

ಸಾಮಾಜಿಕ ಮತ್ತು ಭಾವನಾತ್ಮಕ ಯೋಗಕ್ಷೇಮ: ಮಾತೃಭಾಷೆ ಭಾವನೆಯನ್ನು ಉತ್ತೇಜಿಸುತ್ತದೆ. ವ್ಯಕ್ತಿಗಳು, ತಮ್ಮ ಕುಟುಂಬಗಳು ಮತ್ತು ಸಮುದಾಯಗಳೊಂದಿಗೆ ಭಾವನಾತ್ಮಕ ಸಾಮಾಜಿಕ ಸಂಬಂಧ ಸಾಧಿಸಲು ಸಹಾಯ ಮಾಡುತ್ತದೆ.

ಸಾಂಸ್ಕೃತಿಕ ಸಂರಕ್ಷಣೆ: ಭವಿಷ್ಯದ ಪೀಳಿಗೆಗೆ ಸಾಂಸ್ಕೃತಿಕ ಪರಂಪರೆ ಮತ್ತು ಸಂಪ್ರದಾಯಗಳನ್ನು ಸಂರಕ್ಷಿಸುವಲ್ಲಿ ಮಾತೃಭಾಷೆ ಪ್ರಮುಖ ಪಾತ್ರ ವಹಿಸುತ್ತದೆ.

ತಮಿಳಿಗರ ಮಾತೃಭಾಷೆ ತಮಿಳು ಆಗಿರುವುದು, ಬೆಂಗಾಲಿ ಸಮುದಾಯದವರ ಮಾತೃಭಾಷೆ ಬಂಗಾಳಿ ಆಗಿರುವುದು, ಆದರೆ ಶಿಕ್ಷಣ ಪಡೆಯಬೇಕಾದ ಪಠ್ಯ ಪುಸ್ತಕಗಳ ಭಾಷೆ ಕನ್ನಡವಾಗಿದೆ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಆಂಗ್ಲ ಭಾಷೆಯಾಗಿದೆ.

**ಸಮುದಾಯದವರು ಶಿಕ್ಷಣ ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳು**

**ಸಂವಿಧಾನಿಕ ಸೌಲಭ್ಯಗಳ ಕೊರತೆ:** ತಮಿಳು ಸಮುದಾಯದವರಿಗೆ ಭೂಮಿ ಪಟ್ಟಾ ನೀಡಿರುವುದಿಲ್ಲ. ಬೆಂಗಾಲಿ ಸಮುದಾಯದವರು ಭಾರತಕ್ಕೆ ಬಂದು ಸುಮಾರು 50 ವರ್ಷಗಳು ಕಳೆದರೂ ಈ ಸಮುದಾಯದವರಿಗೆ ಭಾರತದ ಪೌರತ್ವ ದೊರೆತಿಲ್ಲ, ಕೆಲವರಿಗೆ ಮಾತ್ರ ಪೌರತ್ವ ನೀಡಲಾಗಿದೆ. ಭಾರತದ ಬೇರೆ ರಾಜ್ಯಗಳಲ್ಲಿ ನೆಲೆಸಿರುವ ನಾಮಶೂದ್ರ ಸಮುದಾಯದವರಿಗೆ ಎಸ್ ಸಿ ಜಾತಿ ಪ್ರಮಾಣ ಪತ್ರವನ್ನು ನೀಡಿದ್ದರೆ, ಇಲ್ಲಿ 2A ಸ್ಥಾನಮಾನ ನೀಡಿದ್ದಾರೆ ಅದು ಸಹ ಕೆಲವರಿಗೆ ಮಾತ್ರ. ಇದರಿಂದ ಶಿಕ್ಷಣ ಪಡೆದರೂ ಸರ್ಕಾರಿ ಹುದ್ದೆಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಸಮುದಾಯದವರು ಶಿಕ್ಷಣ ಪಡೆದರು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅದಕ್ಕಾಗಿ ಶಿಕ್ಷಣ ಪಡೆಯಲು ನಿರಾಸಕ್ತಿ ತೋರುವರು.

**ಇತರೆ ಸಮಸ್ಯೆಗಳು:** ಪ್ರಾದೇಶಿಕ ಸಮಾನತೆ, ಲಿಂಗ ತಾರತಮ್ಯ, ಮೇಲು–ಕೀಳು, ಬಡವ–ಶ್ರೀಮಂತ, ಸಾರಿಗೆ ಸಂಪರ್ಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಸಮಸ್ಯೆಗಳು ಮುಂತಾದವು.

## ಅಧ್ಯಯನದ ಫಲಿತಗಳು

- ಪುನರ್ ವಸತಿ ನೆಲೆಸಿಗರ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ.
- ಪುನರ್ ವಸತಿ ನೆಲೆಸಿಗರ ಶೈಕ್ಷಣಿಕ ಸ್ಥಿತಿ ಕುಂಠಿತವಾಗಿದೆ.

## ಅಧ್ಯಯನದ ಸಲಹೆಗಳು

- ಪುನರ್ ವಸತಿ ನೆಲೆಸಿಗರು ಪ್ರಾಥಮಿಕ ಶಿಕ್ಷಣಕ್ಕೆ ಮಹತ್ವ ನೀಡಬೇಕು.
- ಪುನರ್ ವಸತಿ ನೆಲೆಸಿಗರು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಆರ್ಥಿಕವಾಗಿ ಸಬಲರಾಗಬೇಕು, ಉನ್ನತ ಹುದ್ದೆಗಳನ್ನು ಪಡೆಯಬೇಕು ಮತ್ತು ರಾಜಕೀಯ ಪ್ರವೇಶ ಮಾಡಬೇಕು.

## ಸಮಾರೋಪ

ಒಟ್ಟಾರೆಯಾಗಿ ಹೇಳುವುದಾದರೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಪುನರ್ ವಸತಿ ಕೇಂದ್ರಗಳಲ್ಲಿ ನೆಲೆಸಿರುವ ಸಮುದಾಯದವರು ಶೈಕ್ಷಣಿಕವಾಗಿ ಉತ್ತಮವಾಗಬೇಕು. ಪುನರ್ ವಸತಿ ನೆಲೆಸಿಗರ ಸಮುದಾಯದವರ ಭಾಷೆ, ಸಂಸ್ಕೃತಿ, ಪಾರಂಪರಿಕ ಜ್ಞಾನ ಕೌಶಲ್ಯಗಳ ಮಹತ್ವವನ್ನು ಅರಿತುಕೊಳ್ಳುವಲ್ಲಿ ಶಿಕ್ಷಣದ ಪಾತ್ರ ಮಹತ್ತರವಾದದ್ದು. ಈ ಸಮುದಾಯದವರು ಪ್ರಸ್ತುತ ದಿನಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕಾದರೆ ಶಿಕ್ಷಣ ಪಡೆಯುವುದು ಅವಶ್ಯಕವಾಗಿದೆ.

## ಪರಾಮರ್ಶನ ಸಾಹಿತ್ಯ

ಚೇತನ್ ಕುಮಾರ್, (2020.12.15), *ಕರ್ನಾಟಕದಲ್ಲಿರುವ ಬಾಂಗ್ಲಾದೇಶಿ ಹಿಂದೂ ನಿರಾಶ್ರಿತರು ಭೂಮಿಯ ಹಕ್ಕನ್ನು ಪಡೆಯಲು ಹತ್ತಿರವಾಗಿದ್ದಾರೆ*, ದಿ ಟೈಮ್ಸ್ ಆಫ್ ಇಂಡಿಯಾ.

ಮೋಹಿನಿ ಸನಾ, (2021), *ಸಿಂಧನೂರು ತಾಲೂಕಿನ ಬೆಂಗಾಲಿ ಸಮುದಾಯದ ಜೀವನ ಪದ್ಧತಿ ಮತ್ತು ಸಂಸ್ಕೃತಿ ಕುರಿತು ಒಂದು ಸಮಾಜಶಾಸ್ತ್ರೀಯ ಅಧ್ಯಯನ*, ಸರ್ಕಾರಿ ಮಹಾವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ.

ಹನುಮಂತಪ್ಪ, 2024, ಸಿಂಧನೂರು ತಾಲೂಕಿನ ಪುನರ್ ವಸತಿ ನೆಲೆಸಿಗರ ಪರಿಚಯ,

ಅಂತರ್ಜಾಲದ ಮಾಹಿತಿ